| JAIN COLLEGE V V Puram | |
|---|---|
| **I PUC Mock Paper – January. 2026** | **Course:** I PUC<br>**Subject:** Kannada<br>**Max.Marks:** 80<br>**Duration:** 3:00 hr |

## ಅ– ವಿಭಾಗ

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.** 10 x 1 =10

1. ಕುಂಭಸಂಭವ ಯಾರು ?

(ಅ) ದುರ್ಯೋಧನ (ಆ) ಕೃಷ್ಣ (ಇ) ದ್ರೋಣ (ಈ) ಸೌಮಿತ್ರಿ

2. ಅಲ್ಲಮಪ್ರಭುವಿನ ಅಂಕಿತ ಯಾವುದು ?

(ಅ) ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ (ಆ) ಗುಹೇಶ್ವರಾ (ಇ) ರಾಮನಾಥ (ಈ) ಚೆನ್ನಮಲ್ಲಿಕಾರ್ಜುನ

3. ಪುಟ್ಟ ದಿಟ್ಟ ಹಕ್ಕಿಗಳೇ
ಕೋಟಿ ಕಂಠದಲಿ ಹಾಡಿ
ಕಾಡು ಕಣಿವೆ ಬೆಟ್ಟಗಳು ಮಾರ್ದನಿಸಲಿ
ಮತ್ತೆ ಸೂರ್ಯ ಬರುತ್ತಾನೆ.

ಈ ಪದ್ಯಭಾಗದ "ಮತ್ತೆ ಸೂರ್ಯ ಬರುತ್ತಾನೆ " ಸಾಲು ಏನನ್ನು ಸೂಚಿಸುತ್ತದೆ ?

(ಅ) ಸೂರ್ಯೋದಯವನ್ನು
(ಆ) ಕತ್ತಲನ್ನು ಹೊಡೆದೋಡಿಸಿದ್ದನ್ನು
(ಇ) ಭವಿಷ್ಯದ ದಿನಗಳಲ್ಲಿ ಕಾಲ ಬದಲಾಗುತ್ತದೆ ಎಂಬ ಭರವಸೆಯನ್ನು
(ಈ) ಭವಿಷ್ಯದ ಬಗ್ಗೆ ಭಯವನ್ನು

4. ನಾಡು ಯಾವುದಕ್ಕೆ ತಾಳ ಹೊಡೆದಿದೆ?

(ಅ) ಉನ್ಮತ್ತ ರೋಷ (ಆ) ನಿತ್ಯ ರುದ್ರ (ಇ) ಉನ್ಮತ್ತ ನಾಟ್ಯ (ಈ) ನೃತ್ಯ ಹೃದಯ

5. ಮಾಯವಾಗಿರುವ ದ್ವೀಪ ಯಾವುದು

(ಅ) ಮೀನು (ಆ) ಹಕ್ಕಿ (ಇ) ನೀರು (ಈ) ಹವಳ

6. ಹುಡುಗನಿಗೆ ಮಹಾತ್ಮಗಾಂಧಿ ಎಂಬ ಹೆಸರನ್ನು ಇಟ್ಟವರು ಯಾರು

(ಅ) ಕರಿಸಿದ್ದೇಗೌಡ (ಆ) ಬುಕ್ಕೇಗೌಡ (ಇ) **ನಾಯ್ಡು** (ಈ) ವೈದ್ಯಾಧಿಕಾರಿ

7. ನಮಗೆಲ್ಲಾ ರಾಗಿಮುದ್ದೆ ! ಎಂದ ತಕ್ಷಣ ನೆನಪಾಗುವುದು ಬಡತನ ಹಾಗೂ ಕನ್ನಡತನ. ಒಂದು ಪ್ರದೇಶದ ಆಹಾರಪದ್ಧತಿಗೂ, ಸಂಸ್ಕೃತಿಗೂ ತಳುಕು ಹಾಕುವುದಾದರೆ ರಾಗಿಯನ್ನು ಬಿಡುವಂತಿಲ್ಲ. ರಾಗಿಮುದ್ದೆಯನ್ನು ಹೊರತುಪಡಿಸಿ ಕನ್ನಡ ಸಂಸ್ಕೃತಿಯ ಬಗ್ಗೆ ಮಾತನಾಡುವಂತಿಲ್ಲ– ಈ ಸಾಲುಗಳು ಏನನ್ನು ಸೂಚಿಸುತ್ತವೆ ?

(ಅ) ರಾಗಿಯ ಮೂಲ ಯಾವುದೆಂಬುದನ್ನು (ಆ) ರಾಗಿಯ ಪ್ರಾದೇಶಿಕತೆಯನ್ನು
(ಇ) ಕರ್ನಾಟಕ ಪರಂಪರೆಯಲ್ಲಿ ರಾಗಿಯ ಮಹತ್ವವನ್ನು (ಈ) ಆಹಾರ ಪದ್ಧತಿಗೂ ಪರಂಪರೆಗೂ ಸಂಬಂಧವಿಲ್ಲ

8. ಬೋಳೇಶಂಕರನ ಹೊಟ್ಟೆನೋವು ಯಾವುದರಿಂದ ಮಾಯವಾಯಿತು?

(ಅ) ಪಾನಕ (ಆ) ಹುಲ್ಲು (ಇ) ಬೇರು (ಈ) ಔಷಧ

9. ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು ?

(ಅ) ಕತ್ತಿಗೆ (ಆ) ಕೊಡಲಿಗೆ (ಇ) ಕೋವಿಗೆ (ಈ) ಸುತ್ತಿಗೆ

10. ಕೈಯಿಂದ ಕೆಲಸ ಮಾಡೋದರಿಂದ ಬುದ್ಧಿ ಬರ್ತದೆ , ಬೆವರೂ ಬರ್ತದೆ , ಬೆವರು ಒರೆಸಿಕೊಂಡು ಬುದ್ಧಿ ಕಲಿಯೋನು ಜಾಣ – ಎಂಬ ಬೋಳೇಶಂಕರನ ಮಾತು ಏನನ್ನು ಧ್ವನಿಸುತ್ತದೆ ?

(ಅ) ಶ್ರಮಸಂಸ್ಕೃತಿಯ ಮಹತ್ವ (ಆ) ಕೆಲಸದಿಂದಾಗುವ ಆಯಾಸ
(ಇ) ಬೆವರು ಸುರಿಸುವುದು ವ್ಯರ್ಥ (ಈ) ದುಡಿಮೆಯ ಅಪ್ರಸ್ತುತತೆ

**(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.** 5 x 1 =5

(ಲುಂಬಿನಿ ಉದ್ಯಾನವನ, ಕೃಷಿಜಮೀನು, ಐದುಜನ, ನಾಪಿತ, ಜ್ಯೋತಿಷ್ಯದ, ದುಷ್ಯಂತ )

11. ಜಾತಕಗಳನ್ನು ___________ ಆಧಾರದಿಂದ ಬರೆಯಲಾಗಿದೆ.
12. ಗೌತಮ ______________ ದಲ್ಲಿ ಜನಿಸಿದನು.
13. ಭರತನ ತಂದೆಯ ಹೆಸರು ________
14. ರೈತ ಮತ್ತು ರೈತ ಕೂಲಿಕಾರರಲ್ಲದವರು _______ ಖರೀದಿಸುವಂತಿಲ್ಲ.
15. ನಾಪಿತನ ಪ್ರಕಾರ ಭೂಮಿಗೆ __________ ಗಂಧರ್ವರು ಬಂದಿದ್ದರು.

16. (ಇ) **ಹೊಂದಿಸಿ ಬರೆಯಿರಿ.** 5 x 1 =5

| | |
|---|---|
| ಅ) ಮಗು ಮತ್ತು ಹಣ್ಣುಗಳು | 1. ಲೋಹದ ಕಣ್ಣು |
| ಆ) ಮತ್ತೆ ಸೂರ್ಯ ಬರುತ್ತಾನೆ | 2. ಬಸವರಾಜ ವಕ್ಕುಂದ |
| ಇ) ಡಾ.ಎಚ್ ಎಲ್ ಪುಷ್ಪ | 3. ಎಚ್. ಎಸ್. ಶಿವಪ್ರಕಾಶ್ |
| ಈ) ಜಂಗಮ ಫಕೀರನ ಜೋಳಿಗೆ | 4. ಡಾ. ಲೋಕೇಶ್ ಆಗಸನಕಟ್ಟೆ |
| ಉ) ಜೀವಕೆ ಇಂಧನ | 5. ಜೈಮಿನಿ ಭಾರತ |
| | 6. ಆರೀಫ್ ರಾಜ |

## ಆ– ವಿಭಾಗ

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ.** 3 x 2 =6

17. ಕೈದು, ಕಾಳೋರಗಗಳಿಗೆ ಏನೇನು ಇರುವುದಿಲ್ಲ?
18. ಸೀತೆಯನ್ನು ಕಾಡಿನ ಪ್ರಾಣಿಗಳು ಹೇಗೆ ಉಪಚರಿಸಿದವು?
19. ಮೃಗಪಕ್ಷಿಗಳನ್ನು ಸ್ವಾಮಿಯು ಹೇಗೆ ರಕ್ಷಿಸುತ್ತಾನೆ?
20. ನಾಡಿನ ಹೊರಗಿನ ಮತ್ತು ಒಳಗಿನ ಕಳ್ಳರು ಯಾರು?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ.** 2 x 2 =4

21. ರಾಗಿಯಲ್ಲಿ ಯಾವ ರೋಗಗಳನ್ನು ತಡೆಯುವ ಗುಣವಿದೆ?
22. ಡಿ.ಸಿ.ಎಂ ಸಂಸ್ಥೆಗೆ ಯಾರು ಯಾರು ಭೇಟಿ ನೀಡಿದ್ದರು ?
23. ರೈತರನ್ನು ಶೋಷಣೆ ಮಾಡಿದವರು ಯಾರು ?
24. ಎರಡನೆಯ ಬಾರಿ ಮಹಾದೇವನ ಉತ್ಸವಕ್ಕೆ ನಾಪಿತ ತೆರಳಿದ್ದೇಕೆ ?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ.** 3 x 2 =6

25. ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದೆ?
26. ಪಿಶಾಚಿಗಳು ಯಾವುದರಿಂದ ನಾಣ್ಯ ಮತ್ತು ಸಿಪಾಯಿಗಳನ್ನು ಮಾಡಿಕೊಡುತ್ತವೆ
27. ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ ?
28. ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ ?

## ಇ– ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** 2 x 3 =6

29. ನಿಂದು ಚೋಳಂ ಕೌತುಕ ಮಿಕ್ಕು ನೋಡುತಂ.
30. ಒನೊನ್ ಚಂಡುನ ಗಾತ್ರ ಹನಿಗಳು.
31. ಹಣ್ಣಿನಂಗಡಿಯಾಗು ನೀನೂನು.

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** 1 x 3 =3

32. ಇಲ್ಲೇ ಒಸಿ ದಿನ ಇಟ್ಕೊಂಡು ಉಳಿಸಿಕೊಡಿ.

33. ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ

34. ಈ ಬಿಸಿಲೇ ಗೌತಮನ್ನ್ನು ಸನ್ಯಾಸಕ್ಕೆ ದೂಡಿರಬೇಕು.

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** 1 x 3 =3

35. ''ಕೊಳೆತ ಬಲೆ ಹಾಕಿ ಎಳೆದರೂ ಬರುವಂಥವರು''

36. ''ಜನ ಎಲ್ಲಿ ಸೇರಿದರೆ ಅಲ್ಲೆ ದರ್ಬಾರು''

**ಈ– ವಿಭಾಗ**

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.** 2 x 4 =8

37. ಅಭಿಮನ್ಯುವಿನ ಶೌರ್ಯ ಸಾಹಸವನ್ನು ದುರ್ಯೋಧನ ಹೇಗೆ ಹೊಗಳುತ್ತಾನೆ?

38. ಹುಟ್ಟು ಸಾವನ್ನು ಮೀರುವುದು ಹೇಗೆಂದು ಅಕ್ಕಮಹಾದೇವಿ ತನ್ನ ವಚನದಲ್ಲಿ ವಿವರಿಸಿದ್ದಾಳೆ?

39. ಸೀತೆಯು **ಕಲ್ಮರಂ** ಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿರಿ.

40. ಕೆಳಗಿನ ಪದ್ಯವನ್ನು ಅವಲೋಕಿಸಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಸುರಿದ ನೆತ್ತರ ಕೆಂಪ ಸಿರಿಯೊ,
ಮಣ್ಣಿಗೊದಗಿದ ತಣ್ಪ ಕರೆಯೋ.
ಹಸುರ ಮೆರೆಯಿತು ಮರುಧರೆ,
ಕಡಲ ಕಡೆಗೋಲಿಟ್ಟು ಕಡೆಯಲು,
ಅಯ್ಯೋ ಬಂತೇ ವಿಷ ವಿಷ,
ನೆಚ್ಚಿ ಕಡೆಯಲು ಮೆಚ್ಚಿ ದುಡಿಯಲು
ಬರದಾಯಿತೆ ಅಮೃತ,
ಅಂತು ಬಂದಿತು ಬಂದೆ ಬಂದಿತು ಎಂಥ ಎಂಥಾ ಬಿಡುಗಡೆ
ಮೋಸ ಸುಳ್ಳಿಗೆ, ಲಂಚ ಸುಲಿಗೆಗೆ,
ಹೃದಯದಾಳದ ಕೊಚ್ಚೆ ಹರಿವಿಗೆ, ಇನ್ನು ಇಲ್ಲವೆ ತಡೆಬಡೆ !

(ಅ) ಹಸುರನ್ನು ಮೆರೆದಿದ್ದು ಯಾರು ? (1 ಅಂಕ )

(ಆ) ಮೆಚ್ಚಿ ದುಡಿಯಲು ಏನು ಬರದಾಯಿತು ? (1 ಅಂಕ )

(ಇ) ಎಂಥ ಬಿಡುಗಡೆ ಬಂದಿತು ಎಂದು ಕವಿ ಹೇಳಿದ್ದಾರೆ ? (2 ಅಂಕ )

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.** 1 x 4 =4

41. ಅನಾಥ ಬಾಲಕರಾಶ್ರಮವನ್ನು ಶಾಸ್ತ್ರಿ ಮಾಸ್ತರರು ಹೇಗೆ ಪ್ರಾರಂಭಿಸಿದರು ?

42. ದುಷ್ಯಂತ ಶಕುಂತಲೆಯ ನಡುವೆ ಅಂತಃಪುರದಲ್ಲಿ ನಡೆದ ಮಾತುಗಳನ್ನು ವಿವರಿಸಿ.

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.** 1 x 4 =4

43. ಬೋಳೇಶಂಕರ ನಾಣ್ಯ ಹಾಗೂ ಸೈನಿರನ್ನು ಪಡೆದ ಪ್ರಸಂಗವನ್ನು ವಿವರಿಸಿ

44. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ

**ಉ– ವಿಭಾಗ ( ಭಾಷಾಭ್ಯಾಸ )**

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ.** 4 x 2 =8

45. ಕೆಳಗಿನ ಎರಡು ಪದಗಳಿಗೆ ನಾನಾರ್ಥ ಬರೆಯಿರಿ.

ಅರಸು. ಮೋರಿ. ಕಲ್ಯಾಣ.

46. ಕೆಳಗಿನ ಎರಡು ಪದಗಳನ್ನು ಬಿಡಿಸಿ ಬರೆಯಿರಿ

ಕಾಳೋರಗ , ರಸಾನುಭವ, ಮಹಾತ್ಮ

47. ಕೆಳಗಿನ ಎರಡು ನುಡಿಗಟ್ಟುಗಳಲ್ಲಿ ಎರಡನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

ಅಡಿಪಾಯ , ಮುಗಿಬೀಳು, ಮುಖವಾಡ.

48. ಕೆಳಗಿನ ಎರಡುಪದಗಳ ತದ್ಭವ ರೂಪ ಬರೆಯಿರಿ

ನಿತ್ಯ, ಅಮೃತ, ಶಿಶು

49. ಕೆಳಗಿನ ಎರಡು ಪದಗಳ ವಿರುದ್ಧಪದಗಳನ್ನು ಬರೆಯಿರಿ.

ಆಡಂಬರ, ಟೊಳ್ಳು, ಲೌಖಿಕ.

50. ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

**(ಆ) ಈ ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** 1 **x** 4 =4

51. ಮೂಢನಂಬಿಕೆಗಳಿಂದ ಸಮಾಜದ ಮೇಲೆ ಆಗುವ ಪರಿಣಾಮಗಳು

**ಅಥವಾ**

ವಿದ್ಯಾರ್ಥಿ ಜೀವನದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಮಹತ್ವ.

**(ಇ) ಈ ವಿಷಯವನ್ನು ಕುರಿತು ಪತ್ರವನ್ನು ಬರೆಯಿರಿ.** 1 **x** 4 =4

(52) ಪ್ರದೀಪ/ ಸುನೀತ ದ್ವಿತೀಯ ಪಿಯುಸಿ ಸರ್ಕಾರಿ ಪದವಿಪೂರ್ವ ಕಾಲೇಜು ಶಿವಮೊಗ್ಗ ಇದು ನಿಮ್ಮ ವಿಳಾಸ ಎಂದು ತಿಳಿದು ಶಿವಮೊಗ್ಗದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ವ್ಯವಸ್ಥಾಪಕರಿಗೆ ನಿಮ್ಮ ಉಳಿತಾಯ ಖಾತೆಯನ್ನು ತೆರೆಯುವಂತೆ ಕೋರಿ ಪತ್ರ ಬರೆಯಿರಿ.

**ಅಥವಾ**

ರಮಾ/ಚೇತನ್, ಕೆ.ಎಲ್,ಇ ಪದವಿ ಪೂರ್ವ ಕಾಲೇಜು , ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ, ಇದನ್ನು ನಿಮ್ಮ ವಿಳಾಸವೆಂದು ಭಾವಿಸಿ ನಿಮ್ಮ ಗೆಳೆಯ/ಗೆಳತಿಯಾದ ರಾಮಕೃಷ್ಣ/ರಾಧಾ ಬಸವೇಶ್ವರ ಪದವಿ ಪೂರ್ವ ಕಾಲೇಜು, ಆದರ್ಶನಗರ, ಕೋಲಾರ ಇವರಿಗೆ ನಿಮ್ಮ ಕಾಲೇಜಿನ ಕನ್ನಡ ರಾಜೋತ್ಸವಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

********